ಕೆಲಸ ಕೈಗೆತ್ತಿಕೊಂಡರು. ಭಾರತದ ಅನನ್ಯ ದೇಶಿ ಜ್ಞಾನಧಾರೆಗಳು ವಿಸ್ಮೃತಿಗೆ ಒಳಗಾಗಿರುವುದನ್ನು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರೂ, ಲೋಹಿಯಾವಾದವನ್ನು ಆಳವಾಗಿ ಬಲ್ಲ ವಿದ್ವಾಂಸರೂ ಆಗಿದ್ದ ಡಿ.ಆರ್. ನಾಗರಾಜ್ 1990ರ ದಶಕದಲ್ಲಿ ಕಂಡುಕೊಂಡರು. ತಾವು ಸಂಪಾದಿಸಿದ 'ಅಕ್ಷರ ಚಿಂತನಮಾಲೆ'ಯ ಪುಸ್ತಕಗಳಲ್ಲಿ ವಿಸ್ಮೃತಿಗೆ ಸಂದ ಚಿಂತನೆಗಳನ್ನು ದಾಖಲಿಸಿದರು. ಆದರೆ, ಲೋಹಿಯಾರ ಸಮಾನ ಲಿಪಿಯ ಕನಸು ಕನಸಾಗಿಯೇ ಉಳಿದಿದೆ.

***

ಸಮಗ್ರ ವ್ಯಕ್ತಿತ್ವವನ್ನು ರೂಪಿಸಲು ಬೇಕಾದ ಎಲ್ಲವೂ ಲೋಹಿಯಾರನ್ನು ಸೆಳೆಯುತ್ತಿದ್ದವು. ಲೇಖಕಿ ನಂದನಾ ರೆಡ್ಡಿ ಬರೆಯುತ್ತಾರೆ: 'ಇಟ್ಯಾಲಿಯನ್ ವೈನ್ಸ್, ಫ್ರೆಂಚ್ ಫುಡ್, ಜರ್ಮನ್ ಫಿಲಾಸಫಿ, ಅಮೆರಿಕನ್ ಸಾಹಿತ್ಯಗಳನ್ನು ಚರ್ಚಿಸಬಲ್ಲವರಾಗಿದ್ದ ಲೋಹಿಯಾ, ಪದ್ಯಗಳನ್ನು ನೆನಪಿಟ್ಟುಕೊಂಡು ಹೇಳಬಲ್ಲವರಾಗಿದ್ದರು. ಅವರ ಪ್ರಿಯವಾದ ಒಂದು ಹಾಡು ಕೋಲ್ ಪೋರ್ಟರ್ ಬರೆದ 'ಗಿವ್ ಮಿ ಮೈ ಲ್ಯಾಂಡ್.'

ಮದರಾಸಿನಲ್ಲಿದ್ದ ಪಟ್ಟಾಭಿರಾಮ ರೆಡ್ಡಿ–ಸ್ನೇಹಲತಾರ ಮನೆಗೆ ಬರುತ್ತಿದ್ದ ಲೋಹಿಯಾ ಮಾತುಕತೆಗಳ ನಡುವೆ ಈ ಎಲ್ಲ ವೈವಿಧ್ಯಮಯ ಮುಖಗಳು ಬಿಚ್ಚಿಕೊಳ್ಳುತ್ತಿದ್ದವು. ಲೋಹಿಯಾ ತಮಗೆ ಪ್ರಿಯವಾದ ಹಾಡುಗಳನ್ನು ಹಾಡುವಂತೆ ಸ್ನೇಹಲತಾರನ್ನು ಕೇಳಿ ಹಾಡಿಸುತ್ತಿದ್ದರು; ತಾವೂ ಗುನುಗುತ್ತಿದ್ದರು. ಸ್ನೇಹಲತಾರ ಮಗಳು ನಂದನಾ ರೆಡ್ಡಿ ಇದನ್ನೆಲ್ಲ ನೆನೆಯುತ್ತಾರೆ. ಲೋಹಿಯಾಗೆ ಪ್ರಿಯವಾಗಿದ್ದ 'ಗಿವ್ ಮಿ ಮೈ ಲ್ಯಾಂಡ್' ಹಾಡಿನ ಸರಳ ಅನುವಾದ:

ನನ್ನ ನಾಡನು ನನಗೆ ಕೊಡು
ಓ ನನ್ನ ನಾಡನು ನನಗೆ ಕೊಡು.

ಚುಕ್ಕಿ ಮಿನುಗುವ ಆಗಸದಡಿಯಲಿ
ಅಗಾಧ ಭೂಮಿಯ ನನಗೆ ಕೊಡು
ಬೇಲಿಯ ಹಾಕದಿರು;
ಬೇಲೀಲಿ ನನ್ನ ಕೂಡಿ ಹಾಕದಿರು.

ನನ್ನೊಲವಿನ ಹಳ್ಳಿಯ ಕಾಡುಮೇಡಿನಲಿ
ನಾ ಸವಾರಿ ಮಾಡಲು ನನ್ನ ಬಿಡು
ಬೇಲಿಯ ಹಾಕದಿರು;
ಬೇಲೀಲಿ ನನ್ನ ಕೂಡಿ ಹಾಕದಿರು

ಲೋಹಿಯಾರ ಪ್ರಿಯ ಹಾಡುಗಳಲ್ಲಿ 'ಲೀಡ್ ಕೈಂಡ್ಲಿ ಲೈಟ್' (ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲಿ) ಕೂಡ ಇತ್ತು. ಅನಾರೋಗ್ಯದಿಂದ ಚೇತರಿಸಿಕೊಳ್ಳುತ್ತಿದ್ದ ಪಾದ್ರಿ ಜಾನ್ ಹೆನ್ರಿ ನ್ಯೂಮನ್ ದೋಣಿಯಲ್ಲಿ ಪಯಣಿಸುತ್ತಿದ್ದಾಗ ಬರೆದ ಈ ಪದ್ಯ ಗಾಂಧೀಜಿಯವರ ಪ್ರಿಯ ಪ್ರಾರ್ಥನೆಯೂ ಆಗಿತ್ತು! ಈ ಪ್ರಾರ್ಥನೆಯಲ್ಲಿರುವ 'ಸಾಕೆನಗೆ ಒಂದು ಹೆಜ್ಜೆ' ಎಂಬ ನಿವೇದನೆಯಂತೆ ಗಾಂಧೀಜಿ ತಮ್ಮ ಅನುಯಾಯಿಗಳ ಒಂದೊಂದೇ ಹೆಜ್ಜೆ ಕೂಡಿಸಿಕೊಂಡು ಗುರಿಯತ್ತ ಮುನ್ನಡೆಸಿದರ ಅಪೂರ್ವ ರೀತಿಯನ್ನು ಲೋಹಿಯಾ ವಿವರಿಸಿದ್ದಾರೆ.

ಕಾವ್ಯ, ಹಾಡು, ಸಂಗೀತ ಎಲ್ಲವನ್ನೂ ಲೋಹಿಯಾ ಹೀರಿಕೊಳ್ಳುತ್ತಿದ್ದರು. ಇಂಥದೊಂದು ಅನುಭವವನ್ನು ಸಮಾಜವಾದಿ ಪಕ್ಷದಿಂದ ಶಿವಮೊಗ್ಗ ಲೋಕಸಭಾ ಕ್ಷೇತ್ರದ ಸದಸ್ಯರಾಗಿದ್ದ ಜೆ.ಎಚ್. ಪಟೇಲ್ ನೆನೆಯುತ್ತಾರೆ. ಚಂದ್ರಶೇಖರ ತೌಡೂರು ದಾಖಲಿಸುವ ಘಟನೆ:

ಲೋಹಿಯಾ, ಮೀನೂ ಮಸಾನಿ, ಜೆ.ಎಚ್. ಪಟೇಲ್ ಹಾಗೂ ಶಾಂತವೇರಿ ಗೋಪಾಲಗೌಡರು ಆಂಡ್ರೆ ಹೆಪ್‌ಬರ್ನ್ ನಟಿಸಿದ 'ಮೈ ಫೇರ್ ಲೇಡಿ' ಸಿನಿಮಾ ನೋಡುತ್ತಾ ಕೂತಿದ್ದರು. ಆಗ ಸಮಾಜವಾದಿ ರಾಜಕಾರಣಿ ರಾಜ್‌ನಾರಾಯಣ್ ಅಲ್ಲಿಗೆ ಬಂದರು.

ಲೋಹಿಯಾ: ಏನು ರಾಜ್‌ನಾರಾಯಣ್! ನೀನು ಡ್ಯಾನ್ಸ್–ಗೀನ್ಸ್, ಖವ್ವಾಲಿ ಇವೆಲ್ಲ ನೋಡಿದ್ದೀಯ?

ರಾಜ್‌ನಾರಾಯಣ್: ನಾನು ಒಂದೂ ನೋಡಿಲ್ಲ ಸಾಬ್!

ಲೋಹಿಯಾ: ನಿನ್ನ ಮನುಷ್ಯ ಅಂತ ಯಾರಂತಾರೆ! ತುಮ್ ತೋ ಜಾನ್ವರ್ ಹೈ ಜಾನ್ವರ್!

ಸರಿಸುಮಾರು ಇದೇ ಕಾಲದಲ್ಲಿ ರಸಿಕ ಜೆ.ಎಚ್. ಪಟೇಲರಿಗೆ ಲೋಹಿಯಾ ಬುದ್ಧಿಮಾತೊಂದನ್ನು ಹೇಳಿದ್ದರು:

'ಪಟೇಲ್, ನೀವು ನಿತ್ಯ ಸಂಜೆ ಮದ್ಯಪಾನದ ಅಭ್ಯಾಸ ಬೆಳೆಸಿಕೊಂಡರೆ ಎರಡು ಪರಿಣಾಮಗಳಾಗುತ್ತವೆ: ಒಂದು, ಸಂಜೆಯ ನಂತರ ನೀವು ನಿಮ್ಮ ಕ್ಷೇತ್ರದ ಮತದಾರರಿಗೆ ಸಿಕ್ಕುವುದಿಲ್ಲ. ಎರಡು, ಸಂಜೆಯ ನಂತರ ನೀವು ನಿಮ್ಮ ವರ್ಗದ ಜನರ ಜೊತೆ ಮಾತ್ರ ಸೇರುತ್ತೀರಿ.'

'ಲೋಹಿಯಾ ಮಾತನ್ನು ಗಂಭೀರವಾಗಿ ತೆಗೆದುಕೊಂಡ ಪಟೇಲರು ಲೋಹಿಯಾ ಇರುವವರೆಗೂ ಅವರ ಮಾತಿನಂತೆ ನಡೆದುಕೊಂಡರು' ಎಂದು ಅನಂತಮೂರ್ತಿ ಹೇಳುತ್ತಿದ್ದರು.

ಲೋಹಿಯಾರ 'ರಾಜಕೀಯದ ಮಧ್ಯೆ ಬಿಡುವು' ಪುಸ್ತಕವೂ ಸೇರಿದಂತೆ ಹಲವು ಲೋಹಿಯಾ ಪುಸ್ತಕಗಳನ್ನು ಓದಿದ್ದ ಜೆ.ಎಚ್. ಪಟೇಲ್ ಒಂದು ಸಂಜೆ ರವಿವರ್ಮಕುಮಾರ್ ಅವರಿಗೆ ತಮಾಷೆಯಾಗಿ ಹೇಳಿದರು:

'ಡಾಕ್ಟರ್ ಸಾಹೇಬರದು 'ರಾಜಕೀಯದ ಮಧ್ಯೆ ಬಿಡುವು'. ನನ್ನದು 'ಬಿಡುವಿನ ಮಧ್ಯೆ ರಾಜಕೀಯ'. ಆದರೆ ದೇವೇಗೌಡರದು 'ಬಿಡುವೇ ಇಲ್ಲದ ರಾಜಕೀಯ'!

ಲೋಹಿಯಾರನ್ನು ಚೆನ್ನಾಗಿ ಓದಿಕೊಂಡಿದ್ದ ಕರ್ನಾಟಕದ ರಾಜಕಾರಣಿ ಎಂ.ಪಿ. ಪ್ರಕಾಶ್ ಮುಂದೆ ಪತ್ರಿಕೆಯೊಂದರಲ್ಲಿ 'ರಾಜಕೀಯದ ಮಧ್ಯೆ ಬಿಡುವು' ಎಂಬ ಅಂಕಣ ಬರೆದರು. 'ರೂಪಕಗಳ ಜೊತೆ ಹುಡುಗಾಟಿಕೆ ಆಡಬಾರದು' ಎಂದು ಖ್ಯಾತ ಕಾದಂಬರಿಕಾರ ಮಿಲನ್ ಕುಂದೇರ ಬರೆಯುತ್ತಾನೆ. ಪ್ರಕಾಶರ ಅಂಕಣ ಬರಹ ಲೋಹಿಯಾ ಸೃಷ್ಟಿಸಿದ 'ರಾಜಕೀಯದ ಮಧ್ಯೆ ಬಿಡುವು' ಎಂಬ ಅನನ್ಯ ರೂಪಕವನ್ನು ಕಳೆಗುಂದಿಸಿದಂತೆ ಕಂಡಿತು!

ಹೀಗೆನ್ನಲು ಕಾರಣವಿದೆ: ಲೋಹಿಯಾರ 'ರಾಜಕೀಯದ ಮಧ್ಯೆ ಬಿಡುವು' ಎಂಬ ರೂಪಕ ಎಲ್ಲ ವ್ಯಕ್ತಿಗಳಿಗೂ ಅಗತ್ಯವಾದ ಆದರ್ಶ ಸ್ಥಿತಿಯನ್ನು ಸೂಚಿಸುವ ರೂಪಕ ಕೂಡ. ಅದು ದೇಶದ ಅಧಿಕಾರ ರಾಜಕಾರಣದಲ್ಲಿರುವ ಮಂದಿ ಮಾತ್ರವಲ್ಲ, ಎಲ್ಲ ಕ್ಷೇತ್ರಗಳ, ಎಲ್ಲ ಬಗೆಯ ರಾಜಕಾರಣಗಳ ನಡುವೆ ಮನುಷ್ಯಮಾತ್ರರು ಸೃಷ್ಟಿಸಿಕೊಳ್ಳುವ ಅನನ್ಯ ಒಳಲೋಕದ ಬಿಡುವಿನ ರೂಪಕ ಕೂಡ!

ಆದ್ದರಿಂದಲೇ ಲೋಹಿಯಾಗೆ ರಾಜಕೀಯದ ಮಧ್ಯೆ 'ಬಿಡುವು' ಎಂದರೆ 'ವಿಶ್ರಾಂತಿ' ಆಗಿರಲಿಲ್ಲ. ಗಾಂಧೀಜಿ ಬೆಂಗಳೂರು ಬಳಿಯ ನಂದಿಬೆಟ್ಟಕ್ಕೆ ಬಂದಿದ್ದಾಗ, ಯಾರೋ ಅವರಿಗೆ ವಿಶ್ರಾಂತಿ ತೆಗೆದುಕೊಳ್ಳಲು ಹೇಳುತ್ತಾರೆ. ಅದಕ್ಕೆ ಗಾಂಧೀಜಿಯ ಉತ್ತರ: 'ವಿಶ್ರಾಂತಿ ಎಂದರೇನು? ಒಂದು ಕೆಲಸದಿಂದ ಇನ್ನೊಂದಕ್ಕೆ ಹೋಗುವುದು, ಅಷ್ಟೆ!'

ಲೋಹಿಯಾರ ಬಿಡುವಿನ ಕಲ್ಪನೆ ಗಾಂಧೀಜಿಯ ಕಲ್ಪನೆಗಿಂತ ಭಿನ್ನವಾಗಿತ್ತು. ಲೋಹಿಯಾರ ಬಿಡುವಿನ ಕಲ್ಪನೆಯೆಂದರೆ ಒಂದು ಅವಸ್ಥೆಯಿಂದ ಇನ್ನೊಂದಕ್ಕೆ ಹೊರಳುವುದು. ಈ ಲೋಹಿಯಾ ನೋಟವನ್ನು ಹಿಂದೆ ಲೋಹಿಯಾರ ಲಾಹೋರ್ ಜೈಲಿನ ಅನುಭವದಲ್ಲಿ ಕಂಡಿದ್ದೇವೆ. ವಿವಿಧ ಅವಸ್ಥೆಗಳಲ್ಲಿ ಲೋಹಿಯಾ ವ್ಯಕ್ತಿತ್ವ ಬೇರೆ ಬೇರೆ ರೀತಿಯಲ್ಲಿ ವಿಕಾಸಗೊಳ್ಳುತ್ತಿತ್ತು.

ನಾಸ್ತಿಕ ಲೋಹಿಯಾ ಬಿಡುವಾದಾಗ ತೀರ್ಥಕ್ಷೇತ್ರಗಳಿಗೂ ಹೋಗುತ್ತಿದ್ದರು. 'ಹಸುವಿನತ್ತ ಕರುವೊಂದು ಓಡಿದಂತೆ ನಾನು ರಾಮೇಶ್ವರದತ್ತ ಧಾವಿಸಿದೆ' ಎನ್ನುವ ಲೋಹಿಯಾ, ನಂತರ ಬರೆಯುತ್ತಾರೆ: 'ಈವರೆಗೆ ಪೂಜೆ ಸಲ್ಲಿಸಲು ನನಗೆ ಸಾಧ್ಯವಾಗಿಲ್ಲ. ಪ್ರಾಯಶಃ ಇನ್ನು ಮುಂದೆ ಕೂಡ ಸಾಧ್ಯವೆನಿಸದೆ ಹೋಗಬಹುದು. ಆದರೆ ಹೇಗೋ ಅವಕಾಶ ಮಾಡಿಕೊಂಡು, ಪವಿತ್ರವಾದ ಕ್ಷೇತ್ರಗಳಿಗೆ ಹೋಗಿಬರುವುದೆಂದರೆ ನನಗೆ ಇಷ್ಟ.' ಕಾರಣ, ಇವು 'ಇಂಡಿಯಾದ ಹಲವು ಪ್ರದೇಶಗಳ ಹಲಬಗೆಯ ಜನ ಒಟ್ಟಾಗಿ ಸೇರುವ ಪ್ರದೇಶಗಳಾದ್ದರಿಂದ ಅವುಗಳಿಗೆ ಮಹತ್ವವಿದೆ.'

ಮೇಲೆ ಚರ್ಚಿಸಿದ ಲೋಹಿಯಾ ಬರಹಗಳನ್ನುಳ್ಳ 'ಇಂಟರ್ವಲ್ ಡ್ಯೂರಿಂಗ್ ಪಾಲಿಟಿಕ್ಸ್' ಎಂಬ ಮಹತ್ವದ ಪುಸ್ತಕವನ್ನು ಕೆ.ವಿ. ಸುಬ್ಬಣ್ಣ 'ರಾಜಕೀಯದ ಮಧ್ಯೆ ಬಿಡುವು' ಎಂದು ಅದ್ಭುತವಾಗಿ ಅನುವಾದಿಸಿದರು. ಪ್ರೊ. ಎಂ.ಡಿ. ನಂಜುಂಡಸ್ವಾಮಿ ಈ ಕೃತಿಗೆ ಟಿಪ್ಪಣಿಗಳನ್ನು ಬರೆದುಕೊಟ್ಟರು.

ಕನ್ನಡದ ಮುಖ್ಯ ಸಾಂಸ್ಕೃತಿಕ ಪಠ್ಯಗಳ ಸಾಲಿನಲ್ಲಿರುವ ಈ ಪುಸ್ತಕ ಮತ್ತೆ ಮತ್ತೆ ಪ್ರಕಟವಾಗುತ್ತಲೇ ಇರುತ್ತದೆ. ಅನೇಕ ಲೇಖಕರಿಗೆ ಸಂಸ್ಕೃತಿ ಚಿಂತನೆಯ ಮುಖ್ಯ ಮಾದರಿಯಾಗಿದೆ.

ಲೋಹಿಯಾರ ಈ ಕೃತಿಯಲ್ಲಿ ಹಾಗೂ ಇನ್ನಿತರ ಬರಹಗಳಲ್ಲಿ ಇಂಡಿಯಾದ ಚಿಂತಕ–ರಾಜಕಾರಣಿಯೊಬ್ಬ ಮೊದಲ ಬಾರಿಗೆ ರೂಪಿಸಿಕೊಂಡ ಸ್ತ್ರೀಕೇಂದ್ರಿತ ಚಿಂತನೆಯ ಮುಖ್ಯ ಮಾದರಿಗಳು ಕೂಡ ವಿಕಾಸಗೊಳ್ಳತೊಡಗಿದವು.

(ಸಶೇಷ)